ಕರ್ನಾಟಕ ಗೃಹ ಮಂಡಳಿಯವರು ಕಟ್ಟಿಸಿರುವ ಮನೆಗಳು ಉಪಯೋಗವಾಗದೆ ಇರುವ ಬಗ್ಗೆ

೮೯೬. ಶ್ರೀ ಹೆಚ್. ಬಿ. ದ್ಯಾವೀರಪ್ಪ (ಮಾಲೂರು).—ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳು ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.

ಅ) ಮಾಲೂರು ತಾಲೋಕ್‌ನಲ್ಲಿ ಟೇಕಲ್ ಮತ್ತು ಮಾಸ್ತಿ ಹೋಬಳಿ ಕೇಂದ್ರಗಳಲ್ಲಿ ಗೃಹ ಮಂಡಳಿಯವರು ಮನೆಗಳನ್ನು ಕಟ್ಟಿಸಿದ್ದಾರೆಯೇ ?

ಆ) ಹಾಗಿದ್ದಲ್ಲಿ ಯಾವಾಗ ಮತ್ತು ಎಷ್ಟು ಮನೆಗಳು ?

ಇ) ಸದರಿ ಮನೆಗಳನ್ನು ಇದುವರೆಗೂ ಉಪಯೋಗಿಸದೆ ಖಾಲಿ ಇರುವುದಕ್ಕೆ ಕಾರಣವೇನು ? ಹಾಗೂ ಇದರಿಂದ ಮನೆಗಳು ಶಿಥಿಲವಾಗುತ್ತಿಲ್ಲವೆ ?

ಈ) ಸದರಿ ಟೇಕಲ್ ಮತ್ತು ಮಾಸ್ತಿ ಗ್ರಾಮಗಳು ಮಂಡಲ ಕೇಂದ್ರಗಳಾಗಿರುವ ಪ್ರಯುಕ್ತ ಈ ಮನೆಗಳಲ್ಲಿ ಮಂಡಲ ಕಚೇರಿ ಮತ್ತು ಅಧಿಕಾರಿಗಳಿಗೆ ವಸತಿ ಸೌಕರ್ಯ ಸಲ್ಲಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುವುದೆ ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಸಂಸದೀಯ ವ್ಯವಹಾರಗಳು ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).—

ಅ) ಕಟ್ಟಿಸಲಾಗಿದೆ.

ಆ) ೧೯೮೦–೬ ಉಪಾಧ್ಯಾಯರ ಗೃಹಗಳು

೧೯೮೧–೬ ಉಪಾಧ್ಯಾಯರ ಗೃಹಗಳು.

ಇ) ಸದರಿ ಮನೆಗಳಿಗೆ ಉಪಾಧ್ಯಾಯರುಗಳು ವಾಸವಿರಲು ಇಷ್ಟಪಡುತ್ತಿಲ್ಲದ ಪ್ರಯುಕ್ತ ಮನೆಗಳು ಖಾಲಿ ಇವೆ. ಇದರಿಂದ ಮನೆಗಳು ಶಿಥಿಲವಾಗಿರುವುದು ನಿಜ.

ಈ) ಉಪಾಧ್ಯಾಯರುಗಳಿಂದ ವಸತಿಗಾಗಿ ಬೇಡಿಕೆ ಇಲ್ಲದಿರುವುದರಿಂದ ಸೂಕ್ತ ಬೆಲೆಗೆ ಬೇಡಿಕೆ ಬಂದರೆ ಮಂಡಳಿಯು ಪರಿಗಣಿಸುವುದು.

ರಾಜ್ಯದಲ್ಲಿನ ಜನತಾ ಮನೆಗಳ ಬಗ್ಗೆ

೮೯೭. ಶ್ರೀ ಜಿ ರಾಮದಾಸ್ (ಹೊಸದುರ್ಗ).—ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳು ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೇ.

ಅ) ೧೯೮೬–೮೭ನೇ ಸಾಲಿನಲ್ಲಿ ರಾಜ್ಯದಲ್ಲಿ ಮಂಜೂರು ಮಾಡಿರುವ ಜನತಾ ಮನೆಗಳೆಷ್ಟು ?

ಆ) ೧೯೮೪–೮೫, ೮೫–೮೬ನೇ ಸಾಲುಗಳಲ್ಲಿ ಹೊಸದುರ್ಗ ತಾಲ್ಲೂಕಿನಲ್ಲಿ ಮಂಜೂರಾಗಿದ್ದ ಜನತಾ ಮನೆಗಳೆಷ್ಟು ? ಅದರಲ್ಲಿ ಪೂರ್ಣಗೊಂಡಿರುವ ಕೆಲಸವೆಷ್ಟು ಹಾಗೂ ಇದರ ವೆಚ್ಚವೆಷ್ಟು ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಸಂಸದೀಯ ವ್ಯವಹಾರಗಳು, ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).—

ಅ) ೧೯೮೬–೮೭ನೇ ಸಾಲಿನಲ್ಲಿ ರಾಜ್ಯದಲ್ಲಿ ಕೆಳಕಂಡಂತೆ ಜನತಾ ಮನೆಗಳು ಮಂಜೂರಾಗಿವೆ.

ಪ್ರಾಯೋಗಿಕ ಕಡಿಮೆ ವೆಚ್ಚದ ಮನೆಗಳು	ಹುಡ್ಕೋ ಸಹಾಯದ ಜನತಾ ಮನೆಗಳು
೨೩,೦೦೫	೫೦,೦೦೦